ಇ) ಹೆಗ್ಗಡದೇವನಕೋಟೆ ಹುಣಸೂರು ಮಾರ್ಗದ ರಸ್ತೆಯಲ್ಲಿ ಸರ್ವೆ ನಂ. ೧೮೮ ಮತ್ತು ಮತ್ತು ೧೬೬.೪ರಲ್ಲಿ ೧೦ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ತೆಗೆದುಕೊಂಡಿದೆ. ಈ ವಿಷಯದಲ್ಲಿ ಕಂದಾಯ ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ.

ಈ) ಕಂದಾಯ ಇಲಾಖೆ ಭೂ ಸ್ವಾಧೀನ ಕೊಟ್ಟ ನಂತರ ಸದರಿ ಕಾಲೇಜಿನ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಕರ್ನಾಟಕ ಆಗ್ರೋ ಇಂಡಸ್ಟ್ರೀಯಲ್ ಕಾರ್ಪೊರೇಷನ್ ಅಗ್ರಿಕಲ್ಚರ್ ಇಂಜಿನಿಯರಿಂಗ್ ಮಂಡ್ಯ ಇವರ ಅಧಿಕಾರ ದುರುಪಯೋಗದ ಬಗ್ಗೆ

೩೫೬. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಡ್ಯದಲ್ಲಿರುವ ಕರ್ನಾಟಕ ಕೃಷಿ ಕೈಗಾರಿಕಾ ನಿಗಮದ ಇಲಾಖೆಯಲ್ಲಿನ ಕೃಷಿ ಇಂಜಿನಿಯರ್‌ರವರು ಅಧಿಕಾರ ದುರುಪಯೋಗ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ಮೈಸೂರು ವಿಭಾಗದ ಕೃಷಿ ವಿಭಾಗೀಯ ಇಂಜಿನಿಯರ್‌ರವರು ಸರ್ಕಾರಕ್ಕೆ ಪತ್ರ ಬರೆದಿರುವುದು ನಿಜವೇ ?

ಇ) ರೇಷ್ಮೆ ಬೆಳಗಾರರು ಹಾಗೂ ಹರಿಜನ ರೈತರು ಸಾಮೂಹಿಕ ನೀರಾವರಿ ಸಹಕಾರ ಸಂಘ ನಿಯಮಿತ ಶೆಟ್ಟಿಹಳ್ಳಿ, ಮಂಳವಳ್ಳಿ ತಾಲ್ಲೂಕು ಇವರುಗಳು ಈ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿರುವುದು ನಿಜವೇ ?

ಈ) ಹಾಗಿದ್ದಲ್ಲಿ, ಆ ಅಧಿಕಾರಿಯ ವಿರುದ್ಧ ಇದುವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಹೌದು.

ಆ) ಸರ್ಕಾರಕ್ಕೆ ಪತ್ರ ಬರೆದಿಲ್ಲ.

ಇ) ರೇಷ್ಮೆ ಬೆಳಿಗಾರರು ಮತ್ತು ಹರಿಜನ ರೈತರು ಸಾಮೂಹಿಕ ನೀರಾವರಿ ಸಹಕಾರ ಸಂಘ, ಶೆಟ್ಟಿಹಳ್ಳಿ. ಮಂಳವಳ್ಳಿ ತಾಲ್ಲೂಕು ಇವರಿಂದ ಯಾವುದೇ ಮನವಿಯು ಬಂದಿರುವುದಿಲ್ಲ. ಆದರೆ ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ಮತ್ತು ಅದರ ಅಧೀನ ನಿಗಮಂಗಳ ಹರಿಜನ ಮತ್ತು ಗಿರಿಜನ ನೌಕರರ ಕ್ಷೇಮಾಭಿವೃದ್ಧಿ ಸಂಘ ಇವರು ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಷಯದಲ್ಲಿ ಒಂದು ಮನವಿಯನ್ನು ಸಲ್ಲಿಸಿರುತ್ತಾರೆ.

ಈ) ಸದರಿ ನೌಕರರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುವ ಬಗ್ಗೆ ಕರ್ನಾಟಕ ಕೃಷಿ ಕೈಗಾರಿಕಾ ನಿಗಮವು ಇವರ ಮೇಲೆ ಇರುವ ಆಪಾದನೆಗಳ ಬಗ್ಗೆ ಪರಿಶೀಲಿಸುತ್ತಿದೆ.

ಮೈಸೂರು ಕೃಷ್ಣರಾಜಸಾಗರ ರಸ್ತೆಯನ್ನು ಜೋಡಿ ರಸ್ತೆ ಮಾಡುವ ಬಗ್ಗೆ

೧೯೮. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದಿಂದ ಕೃಷ್ಣರಾಜಸಾಗರವನ್ನು ಸೇರುವ ರಸ್ತೆಯ ಇಬ್ಬದಿಯಲ್ಲಿ ಅನೇಕ ಕೈಗಾರಿಕೆಗಳು ಪ್ರಾರಂಭವಾದಾಗಿನಿಂದ ರಸ್ತೆಯಲ್ಲಿ ಸಂಚಾರ ಒತ್ತಡ ಹೆಚ್ಚಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?